# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 138 | Pages. 2 | Date: 02-04-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 138 - ಪುಟಗಳು : 2 - 02 ಏಪ್ರಿಲ್ 2025 ಬುಧವಾರ Ph: 8762954248 ದರ : ₹1


# ಸ್ಲಂ ಬೋರ್ಡ್ ನಿವೇಶನ ದುರುಪಯೋಗ

## ಶಾಸಕ ಹೆಚ್.ಡಿ. ರೇವಣ್ಣ ಗಂಭೀರ ಆರೋಪ | ಬಾಡಿಗೆ ನೀಡಿರುವವರನ್ನು ಹೊರ ಹಾಕಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಸ್ಲಂ ಬೋರ್ಡ್‌ನಿಂದ ಹಂಚಿಕೆ ಮಾಡಲಾದ 2 ಸಾವಿರ ಮನೆಗಳು ಅರ್ಹ ಫಲಾನುಭವಿಗಳಿಗೆ ಸಿಗದೆ ಅನ್ಯಾಯವಾಗಿದ್ದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕಿದೆ ಎಂದು ಶಾಸಕ ಹೆಚ್.ಡಿ. ರೇವಣ್ಣ ಹೇಳಿದರು.

ಪಟ್ಟಣದ ಪುರಸಭೆ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 18 ವಾರ್ಡ್‌ಗಳ ಆಯ್ದ ಪ್ರದೇಶವನ್ನು ಹತ್ತು ವರ್ಷಗಳ ಹಿಂದೆಯೇ ಕೊಳಚೆ ಪ್ರದೇಶ ಎಂದು ಘೋಷಿಸಲಾಗಿದೆ. ಗುರುತಿಸಿದ ಪ್ರದೇಶದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಡಲಾಗಿದೆ. ಅದೇ ಕ್ರಮ ಅನುಸರಿಸಿ ಸ್ಲಂ ಬೋರ್ಡ್‌ನಲ್ಲೂ 2 ಸಾವಿರ ಮನೆ ನಿರ್ಮಿಸಿ ವಸತಿ ರಹಿತ ಫಲಾನುಭವಿಗಳಿಗೆ ವಿತರಿಸಲಾಗಿತ್ತು. ಆದರೆ ಇತ್ತೀಚೆಗೆ ಹಲವು ಮನೆಗಳು ಉಳ್ಳವರ ಪಾಲಾಗಿವೆ. ಅಂತವರನ್ನು ಗುರುತಿಸಿ ಮೂಲ ಮಾಲೀಕರಲ್ಲದೆ ಬಾಡಿಗೆಗೆ ನೀಡಿರುವವರನ್ನು ಹೊರ ಹಾಕುವ ಕೆಲಸ ತುರ್ತಾಗಿ ಆಗಬೇಕಿದೆ. ಬಡವರಿಗೆ ಕೊಟ್ಟಿರುವ ಮನೆಗಳು ದುರುಪಯೋಗ ಆಗಬಾರದು. ಮುಲಾಜಿಲ್ಲದೆ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ಒತ್ತಾಯಿಸಿದರು.



### ಇ-ಖಾತಾ ಆಂದೋಲನ

ಪುರಸಭೆ ವ್ಯಾಪ್ತಿಯ ಆಸ್ತಿಗೆ ಮಾಲೀಕರು ಅಗತ್ಯ ದಾಖಲಾತಿ ಹೊಂದಲು ಸದ್ಯದಲ್ಲೇ ಇ-ಖಾತಾ ಆಂದೋಲನ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಬಿ- ಖಾತಾ ಪಡೆಯಲು ಸರ್ಕಾರದಿಂದ ಆಂದೋಲನ ನಡೆಸಲಾಗುತ್ತಿದೆ. ಅದೇ ಮಾದರಿಯಲ್ಲಿ ಇ-ಸ್ವತ್ತಿಗೂ ಸಹ ಆಂದೋಲನ ನಡೆಸಬೇಕಿದೆ. ಹಲವು ವರ್ಷಗಳಿಂದ ಮೃತರ ಹೆಸರಿನಲ್ಲಿ ಸ್ವತ್ತು ಉಳಿದಿದ್ದರೆ ಪೌತಿ ಖಾತೆ ಮಾಡಿಕೊಡಲು ಕ್ರಮ ಕೈಗೊಳ್ಳಬೇಕು. ಇ-ಖಾತೆಗೆ ಅರ್ಜಿ ನೀಡಿದವರನ್ನು ಅನಗತ್ಯ ಅಲೆದಾಡಿಸುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಮಧ್ಯವರ್ತಿಗಳ ಮೂಲಕ ಶಿಫಾರಸ್ಸು ತರುವವರನ್ನು ದೂರ ಇಡಬೇಕು ಎಂದರು.

ಕಚೇರಿಗೆ ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕೆಂದರೆ ಸಿಸಿಟಿವಿ ಕ್ಯಾಮರಾ ಪರಿಶೀಲಿಸಬೇಕು. ನೇರವಾಗಿ ಬರುವವರಿಗೆ ಆದ್ಯತೆ ನೀಡಬೇಕು. ಉಮೇಶ್ ಎಂಬಾತ ಸಾರ್ವಜನಿಕರಿಂದ ಹಣ ಪೀಕುತ್ತಿದ್ದಾನೆ ಎಂಬ ಆರೋಪಗಳು ಕೇಳಿಬಂದಿವೆ. ಈ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಲು ಸೂಚನಾ ಫಲಕ ಅಳವಡಿಸಬೇಕು. ಯಾರಾದರೂ ಖಾತೆ ಮಾಡಿಕೊಡಲು ಲಂಚ ಕೇಳಿದರೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಬೇಕು ಎಂದು ಸಲಹೆ ನೀಡಿದರು.

ಪುರಸಭೆ ಅಧ್ಯಕ್ಷ ಹೆಚ್.ಕೆ. ಪ್ರಸನ್ನ, ಯೋಜನಾಧಿಕಾರಿ ರಮೇಶ್ ಇತರರಿದ್ದರು.

### ಗೊಂದಲದ ಗೂಡಾದ ಸಭೆ

ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಕರೆದಿದ್ದ ಬಾಬು ಜಗಜೀವನರಾಮ್ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪೂರ್ವಸಿದ್ಧತಾ ಸಭೆ ಗೊಂದಲದ ಗೂಡಾಗಿ ಮಾರ್ಪಾಡಾಯಿತು.

ಸಭೆಗೆ ಕೆಲವೇ ಮುಖಂಡರನ್ನು ಆಹ್ವಾನಿಸಿ ಅಧಿಕಾರಿಗಳು ತಾರತಮ್ಯ ಮಾಡುತ್ತಿದ್ದಾರೆ ಎಂದು ದಲಿತ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. ಶಾಸಕ ಹೆಚ್.ಡಿ. ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗಿತ್ತು.

ಮಹನೀಯರ ಜಯಂತಿ ಆಚರಣೆಗೆ ಎಲ್ಲ ಸಂಘ, ಸಂಸ್ಥೆಗಳು ಹಾಗೂ ಅಧಿಕಾರಿಗಳನ್ನು ಕರೆಯದೇ ಕಾಟಾಚಾರಕ್ಕೆ ಕೆಲವರನ್ನು ಮಾತ್ರ ಆಹ್ವಾನಿಸಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಕೂರು ಬಸವರಾಜ್, ವಕೀಲ ಮಂಜುನಾಥ್ ಧ್ವನಿ ಎತ್ತಿದರು.

ತಹಶೀಲ್ದಾರ್ ವೈ.ಎಂ. ರೇಣುಕುಮಾರ್ ಪ್ರತಿಕ್ರಿಯಿಸಿ, ನಿಯಮಾನುಸಾರ ಎಲ್ಲರನ್ನೂ ಆಹ್ವಾನಿಸಿದ್ದೇವೆ ಎಂದು ಸಮರ್ಥಿಸಿಕೊಂಡರು. ಮಧ್ಯ ಪ್ರವೇಶಿಸಿದ ದಲಿತ ಮುಖಂಡರು ಜಗಜೀವನ್‌ರಾಮ್ ಹಾಗೂ ಅಂಬೇಡ್ಕರ್ ಒಂದು ಸಮುದಾಯಕ್ಕೆ ಸೀಮಿತರಾಗಿಲ್ಲ. ಸರ್ಕಾರಿ ಅಧಿಕಾರಿಗಳೇ ಅಸಡ್ಡೆ ತೋರಿದರೆ ಸಹಿಸುವುದಿಲ್ಲ. ಪಟ್ಟಣದಲ್ಲಿ ಒಂದೇ ಸಂಘ ಇದೆಯೇ.? ಕೆಲವೇ ಇಲಾಖೆ ಅಧಿಕಾರಿಗಳು ಸಭೆಗೆ ಬಂದಿದ್ದಾರೆ. ಇದು ತಿಪ್ಪೆ ಸಾರಿಸುವ ಪ್ರವೃತ್ತಿ ಎಂದು ವಾಗ್ದಾಳಿ ನಡೆಸಿ ಸಭೆಯಿಂದ ನಿರ್ಗಮಿಸಿದರು.

ನಂತರ ಸಭೆ ನಡೆಸಿದ ಅಧಿಕಾರಿಗಳು, ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮತ್ತು ಸಾಧಕರನ್ನು ಸನ್ಮಾನಿಸಲು ತೀರ್ಮಾನಿಸಿದರು.

ತಾಲ್ಲೂಕು ಪಂಚಾಯಿತಿ ಯೋಜನಾಧಿಕಾರಿ ಗೋಪಾಲ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಸ್ವಪ್ನ, ಲೋಕೋಪಯೋಗಿ ಇಲಾಖೆ ಎಇಇ ರುಕ್ಮಾಂಗದ, ಪಿಎಸ್‌ಐ ಅಭಿಜಿತ್ ಹಾಜರಿದ್ದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ವೈ. ಚಂದ್ರಶೇಖರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ಆರ್. ಮಂಜುನಾಥ್, ಡಿಎಸ್‌ಎಸ್ ರಾಜ್ಯ ಸಂಚಾಲಕ ಸೋಮಶೇಖರ್, ಪುರಸಭಾ ಸದಸ್ಯರಾದ ಜವರೇಶ್, ಉಮೇಶ್, ಮುತ್ತುರಾಜ್, ಮಾಜಿ ಸದಸ್ಯ ರಾಘವೇಂದ್ರ, ಚಿನ್ನಸ್ವಾಮಿ ಇತರರು ಇದ್ದರು.

# ಅರ್ಥಪೂರ್ಣ ಅಂಬೇಡ್ಕರ್ ಜಯಂತಿಗೆ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಎಲ್ಲಾ ಸಂಘಟನೆ ಮುಖಂಡರು ಹಾಗೂ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಸೂಚಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಮಂಗಳವಾರ ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ದೇಶದ ಎಲ್ಲಾ ಜಾತಿ ಹಾಗೂ ಧರ್ಮದವರಿಗೂ ಸಮಾನತೆಯನ್ನು ಸಾರುವ ಪ್ರಪಂಚಕ್ಕೆ ಮಾದರಿಯಾದ ಸಂವಿಧಾನ ರಚಿಸಿ ದೇಶ ಸಮಾನತೆಯ ಪಥದಲ್ಲಿ ಸಾಗುವುದಕ್ಕೆ ಕಾರಣೀಕರ್ತರಾಗಿದ್ದಾರೆ ಎಂದರು.



ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಅಂಗವಾಗಿ ಏ. 14ರ ಬೆಳಿಗ್ಗೆ 10.30ಕ್ಕೆ ಹೇಮಾವತಿ ಪ್ರತಿಮೆಯಿಂದ ವಿವಿಧ ಕಲಾತಂಡಗಳು, ವಾದ್ಯ ಗೋಷ್ಠಿಗಳೊಂದಿಗೆ ಅಂಬೇಡ್ಕರ್ ಅವರ ಭಾವಚಿತ್ರದ ಮೆರವಣಿಗೆ ಹಮ್ಮಿಕೊಳ್ಳಲಾಗುವುದು. ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಅವರು ವಿವರಣೆ ನೀಡಿದರು. ಸಭೆಯಲ್ಲಿ ತಹಶೀಲ್ದಾರ್ ಅರವಿಂದ್, ಡಿವೈಎಸ್ಪಿ ಪ್ರಮೋದ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಪರಮೇಶ್ವರಪ್ಪ, ಬೌದ್ಧ ಸಂಘಟನೆಗಳ ಮುಖಂಡ ನಾಗಸೇನಾ, ಲಕ್ಷ್ಮಣ್ ಕೀರ್ತಿ, ಬೈಕೆರೆ ದೇವರಾಜು, ಕೊಮಾರಯ್ಯ, ವೀರೇಶ್ ಕಲ್ಗಣೆ, ಜೈಭೀಮ್ ಮಂಜು, ಶಿವಣ್ಣ, ನಿರ್ವಾಣಯ್ಯ, ರಮೇಶ್, ಯಸಳೂರು ಮಂಜು, ವೆಂಕಟೇಶ್, ಹೆನ್ನಲಿ ಶಾಂತರಾಜು ಇತರರಿದ್ದರು.

# ಬೇಟೆಗೆ ಬಂದ ಚಿರತೆ: ಬೊಗುಳಿ ಓಡಿಸಿದ ನಾಯಿ!

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತನ್ನನ್ನು ಬೇಟೆಯಾಡಲು ಮನೆಬಾಗಿಲಿಗೆ ಬಂದು ಹೊಂಚು ಹಾಕಿ ಕೂತಿದ್ದ ಚಿರತೆಯನ್ನು ಸಾಕುನಾಯಿಯೊಂದು ಬೊಗುಳಿ ಓಡಿಸಿ ತನ್ನ ಪ್ರಾಣ ತಾನೇ ಕಾಪಾಡಿಕೊಂಡ ಘಟನೆ ತಾಲೂಕಿನ ದೇವಿಹಳ್ಳಿಯಲ್ಲಿ ಸೋಮವಾರ ರಾತ್ರಿ ನಡೆದಿದ್ದು, ಇಡೀ ಘಟನೆ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಗ್ರಾಮದ ತಿಮ್ಮೇಗೌಡ ಎಂಬುವವರ ತೋಟದ ಮನೆಗೆ ಬಂದ ಚಿರತೆ ಅದರ ಬೇಟೆಗಾಗಿ ಕಾದು ಕುಳಿತಿತ್ತು. ಚಿರತೆ ಕಂಡ ಕೂಡಲೇ ನಾಯಿ ಜೋರಾಗಿ ಬೊಗಳಲು ಆರಂಭಿಸಿತು. ನಾಯಿ ಬೊಗಳಿದ ಕೂಡಲೇ ಚಿರತೆ ಓಡಿ ಹೋಯಿತು. ನಾಯಿ ಬೇಟೆಯಾಡಲು ಬಂದಿದ್ದ ಚಿರತೆ



ಪ್ರಯತ್ನ ವಿಫಲವಾಯಿತು.

ಚಿರತೆಯ ಓಡಾಟದ ವಿಡಿಯೋ ಸಿಸಿಟಿವಿಯಲ್ಲಿ ಸೆರೆಯಾಗಿದೆ. ದೇವಿಹಳ್ಳಿ, ಶಾಂತಿಗ್ರಾಮ ಹಾಗೂ ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದ್ದು, ಕೂಡಲೇ ಅರಣ್ಯ ಇಲಾಖೆಯವರು ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಲಕ್ಷಾಂತರ ಮಕ್ಕಳಿಗೆ ಬೆಳಕಾದ ಶಿವಕುಮಾರ ಶ್ರೀ



ಅರಕಲಗೂಡು: ಜಾತಿ ಮತಗಳ ಬೇಧವಿಲ್ಲದೆ ಅನ್ನ ದಾಸೋಹದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ಡಾ. ಶಿವಕುಮಾರ ಸ್ವಾಮೀಜಿ ಬೆಳಕಾಗಿದ್ದಾರೆ ಎಂದು ಶಾಸಕ ಎ. ಮಂಜು ಹೇಳಿದರು.

ಪಟ್ಟಣದ ಕೊತ್ತಲು ಗಣಪತಿ ದೇವಾಲಯ ಆವರಣದಲ್ಲಿ ವೀರಶೈವ ಸಮಾಜದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉನ್ನತ ಶಿಕ್ಷಣ ಸಂಸ್ಥೆಗಳನ್ನು ತೆರೆದು ಉಳ್ಳವರಿಗೆ ಶಿಕ್ಷಣ ಕೊಡಿಸುವ ಮಂದಿಯೇ ಹೆಚ್ಚು. ಆದರೆ ಶ್ರೀಗಳು ಎಲ್ಲ ವರ್ಗದ ಮಕ್ಕಳಿಗೂ ಸಮಾನ ಶಿಕ್ಷಣ ನೀಡಿದರೆ ಸಮಾಜ ಉದ್ಧಾರವಾಗಲಿದೆ ಎಂಬುದನ್ನು ಅರಿತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಸಾಧನೆ ಮಾಡಿ ಸಾಕಾರಗೊಳಿಸಿದ್ದಾರೆ ಎಂದರು.

ತಹಶೀಲ್ದಾರ್ ಸೌಮ್ಯ ಮಾತನಾಡಿ, ಶ್ರೀ ಶಿವಕುಮಾರ ಸ್ವಾಮೀಜಿ ಅವರ ಕಾಯಕ ಸೇವೆಗಳನ್ನು ಪರಿಗಣಿಸಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು. ಬಸವಣ್ಣನವರ ಬಳಿಕ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದು ಶ್ರೀಗಳು ಎಂದು ಶ್ಲಾಘಿಸಿದರು.

# ಬೇಡಿಕೆ ಈಡೇರಿಕೆಗೆ ಸಂಘಟಿತ ಹೋರಾಟ ಬೇಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ನ್ಯಾಯಯುತ ಬೇಡಿಕೆ ಈಡೇರಬೇಕೆಂದರೆ ಹೋರಾಟ ಮಾಡುವುದು ಅಗತ್ಯವಾಗಿದ್ದು ಸಂಘಟನೆಗೆ ಆದ್ಯತೆ ನೀಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ಪಾಳ್ಯ ಹೋಬಳಿ ಸಂಕಲಾಪುರ ಗ್ರಾಮದಲ್ಲಿ ರಾಜ್ಯ ಬೆಳೆಗಾರರ ಒಕ್ಕೂಟ, ಜಿಲ್ಲಾ ಪ್ಲಾಂಟರ್ಸ್ ಸಂಘ, ತಾಲ್ಲೂಕು ಕಾಫಿ ಬೆಳೆಗಾರರ ಸಂಘ ಮತ್ತು ಪ್ರಕೃತಿ ಸಣ್ಣ ಕಾಫಿ ಬಳಗದ ಸಂಘದಿಂದ ಮಂಗಳವಾರ ಹಮ್ಮಿಕೊಂಡಿದ್ದ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಆಲೂರು-ಸಕಲೇಶಪುರ ಭಾಗದಲ್ಲಿ ಕಳೆದ ನಾಲ್ಕು ದಶಕಗಳಿಂದ ಕಾಡಾನೆ ಸಮಸ್ಯೆ ನಿರಂತರವಾಗಿದೆ. ಜೀವ, ಬೆಳೆ ಹಾಗೂ ಆಸ್ತಿಪಾಸ್ತಿ ಹಾನಿಯಾಗುತ್ತಿದೆ. ಈ ಬಗ್ಗೆ ಈಗಾಗಲೇ ಬೆಳೆಗಾರರ ಸಂಘಟನೆಯೊಂದಿಗೆ ಅರಣ್ಯ ಸಚಿವರನ್ನು ಭೇಟಿಯಾಗಿ ಸಮಸ್ಯೆ ಗಂಭೀರತೆಯನ್ನು ತಿಳಿಸಲಾಗಿದೆ. ಕಾಫಿ ಬೆಳೆಗಾರರ ಸಂಘಟನೆ ಹೆಚ್ಚು ಬಲ






ಹೊಂದಿದ್ದು ಕ್ರಿಯಾಶೀಲರಾಗಿ ಕೆಲಸ ನಿರ್ವಹಿಸುತ್ತಿದೆ. ಶಾಸಕನಾಗಿ ಅಧಿಕಾರ ಬಳಸಿ ಕ್ಷೇತ್ರದ ಹಲವು ಸಮಸ್ಯೆ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಗಟ್ಟಿಯಾಗಿ ಧ್ವನಿ ಎತ್ತಿದ್ದೇನೆ. ಮುಂದೆಯೂ ಸರ್ಕಾರದ ಮೇಲೆ ಹೆಚ್ಚು ಒತ್ತಡ ತಂದು ಬೆಳೆಗಾರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಮುಂದಾಗುತ್ತೇನೆ. ಪ್ರಸಕ್ತ ಸಾಲಿನಲ್ಲಿ ಕಾಫಿ ಬೀಜಕ್ಕೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರೆತು ಬೆಳೆಗಾರರ ಕಷ್ಟ ಅಲ್ಪಸ್ವಲ್ಪ ಪರಿಹಾರವಾಗಿದೆ. ಭೂತಾಯಿ ಎಂದಿಗೂ ತನ್ನನ್ನು ನಂಬಿದವರನ್ನು ಕೈ ಬಿಡುವುದಿಲ್ಲ ಎನ್ನುವುದು ಇಂದು ಸಾಕ್ಷಿಯಾಗಿದೆ ಎಂದರು. ದೇವರಾಜ ಅರಸು ಅಭಿವೃದ್ಧಿ ನಿಗಮದ ನಿರ್ದೇಶಕ ಎಂ.ಡಿ. ಕಾಂತರಾಜ್ ಮಾತನಾಡಿ, ಕಾಫಿ ಬೆಳೆಗಾರರು ಕೃಷಿ ಚಟುವಟಿಕೆ ಜೊತೆಗೆ ಸಂಘಟನೆಯೊಂದಿಗೆ ಹೋರಾಟ ಮಾಡಿ ಯಶಸ್ಸು ಕಾಣಬೇಕು. ಹಲವು ದಶಕಗಳಿಂದ ಜೀವಂತವಾಗಿರುವ ಕಾಡಾನೆ ಸಮಸ್ಯೆ ಬಗೆಹರಿದಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಪರಿಸರ ನಾಶವಾಗುತ್ತದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಇದರ ಪರಿಣಾಮ ಮಲೆನಾಡಿನಲ್ಲಿ ಹವಾಮಾನ ವೈಪರಿತ್ಯ ಉಂಟಾಗಿ ಮಳೆಗಾಲದಲ್ಲಿ ಬಿಸಿಲು, ಬೇಸಿಗೆಯಲ್ಲಿ ಮಳೆ ಈ ರೀತಿಯಾಗಿ ಇಲ್ಲಿಯ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುವುದಕ್ಕೆ ಕಷ್ಟವಾಗಿದೆ. ಸಂಘಟನೆಗಳು ತಮ್ಮ ಹೋರಾಟದ ಮೂಲಕ ಸರ್ಕಾರದ ಗಮನ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದರು.

ಸಂಕಲಾಪುರಮಠ ಮತ್ತು ಕಲ್ಮಠದ ಶ್ರೀ ಧರ್ಮ ರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ಎಚ್.ಎಂ. ವಿಶ್ವನಾಥ್, ಪ್ರಕೃತಿ ಸಣ್ಣ ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಎಸ್. ಶಶಿಧರ, ಕರ್ನಾಟಕ ಬೆಳೆಗಾರರ ಒಕ್ಕೂಟ ಅಧ್ಯಕ್ಷ ಹೆಚ್.ಪಿ. ಶಿವಣ್ಣ, ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ವಿ.ಎಸ್. ಪರಮೇಶ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕೆ.ಎಸ್. ಮಂಜೇಗೌಡ, ಕರ್ನಾಟಕ ಬೆಳಗಾರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಟಿ.ಪಿ. ಸುರೇಂದ್ರ, ಗೌರವ ಕಾರ್ಯದರ್ಶಿ ಕೆ.ಟಿ. ಲೋಹಿತ್, ಆಲೂರು ತಾಲ್ಲೂಕು ಬೆಳಗಾರರ ಸಂಘದ ಅಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಬೋಪಣ್ಣ ಇತರರು ಉಪಸ್ಥಿತರಿದ್ದರು.


# ಬಿ.ಆರ್. ಗೌಡಗೆ ಚಿನ್ನದ ಪದಕ



ಹಾಸನ: ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಆರ್. ಗೌಡ ಅವರ ಸೇವಾ ಜೇಷ್ಠತೆಯನ್ನು ಗುರುತಿಸಿ ರಾಜ್ಯ ಸರ್ಕಾರ 2024ನೇ ಸಾಲಿನ ಚಿನ್ನದ ಪದಕ ಮತ್ತು ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರಸ್ತುತ ನೆಲಮಂಗಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಿ.ಆರ್. ಗೌಡ ಅವರು ಏ. 2 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಪೊಲೀಸ್ ಇಲಾಖೆ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಚಿನ್ನದ ಪದಕ ಮತ್ತು ಪ್ರಶಸ್ತಿ ಸ್ವೀಕಾರ ಮಾಡಲಿದ್ದಾರೆ. ಅತ್ಯುನ್ನತ ಪ್ರಶಸ್ತಿಗೆ ಭಾಜನರಾಗಿರುವ ಗೌಡರಿಗೆ ಗವಿರಂಗೇಗೌಡ, ಹೆಚ್.ಎಸ್. ಶಿವಶಂಕರ್, ಮರಳಿ ಶರತ್ ಮತ್ತು ಸಂಸದ ಶ್ರೇಯಸ್ ಪಟೇಲ್ ಅವರ ಮಾಧ್ಯಮ ಸಂಯೋಜಕ ಸ್ವರೂಪ್ ಮಳಲಿ ಅವರು ಅಭಿನಂದಿಸಿ ಶುಭ ಕೋರಿದ್ದಾರೆ.

# ಉರುಳಿಗೆ ಸಿಲುಕಿದ ಜಿಂಕೆ ರಕ್ಷಣೆ



ಸಕಲೇಶಪುರ: ತಂತಿ ಬೇಲಿ ಹಾರುವಾಗ ಜಿಂಕೆಯೊಂದು ಬೇಲಿಗೆ ಸಿಲುಕಿ ನರಳಾಡಿದ ಘಟನೆ ತಾಲ್ಲೂಕಿನ ಗುಳಗಳಲೆ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ತಂತಿ ಬೇಲಿಗೆ ಸಿಲುಕಿ ಗಂಭೀರ ಗಾಯಗೊಂಡಿರುವ ಜಿಂಕೆಯನ್ನು ಸ್ಥಳೀಯರು ಬಿಡಿಸಿ ಪ್ರಾಣಾಪಾಯದಿಂದ ಪಾರು ಮಾಡಿದರು. ನಂತರ ನೀರು ಹಾಕಿ ಆರೈಕೆ ಮಾಡಿದರು. ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಗಾಯಗೊಂಡಿರುವ ಜಿಂಕೆಯನ್ನು ಪಶು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

# ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯುತ್ಸವ ಆಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತ್ರಿವಿಧ ದಾಸೋಹಿ, ಪದ್ಮಭೂಷಣ, ಕರ್ನಾಟಕ ರತ್ನ ಹಾಗೂ ನಡೆದಾಡುವ ದೇವರು ಎಂದೇ ಖ್ಯಾತರಾದ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮ ದಿನಾಚರಣೆಯನ್ನು ನಗರ ಸೇರಿ ಜಿಲ್ಲಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹಾಸನ ತಣ್ಣೀರುಹಳ್ಳ ಮಠದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ನಗರದ ಪ್ರಮುಖ ವೃತ್ತಗಳಲ್ಲಿ ಡಾ. ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ, ಅನ್ನ ದಾಸೋಹ ಏರ್ಪಡಿಸಲಾಗಿತ್ತು. ನಗರದ ಗಂಧದ ಕೋಠಿ ಶ್ರೀ ಶಿವಕುಮಾರ ಸ್ವಾಮಿ ವೃತ್ತದಲ್ಲಿ ಉಚಿತ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. 118





ಕೆ.ಜಿ. ತೂಕದ ಕೇಕ್ ಕತ್ತರಿಸಲಾಯಿತು.

ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್, ಆಟೋ ಮಾಲೀಕರು ಹಾಗೂ ಚಾಲಕರ ಸಂಘದಿಂದ ಹಮ್ಮಿಕೊಂಡಿದ್ದ ಶಿಬಿರದ ಸದುಪಯೋಗವನ್ನು 100ಕ್ಕೂ ಹೆಚ್ಚು ಜನರು ಪಡೆದರು.

ಬೆಳಿಗ್ಗೆ 9 ಗಂಟೆಗೆ ಶ್ರೀ ಶಿವಕುಮಾರ ಸ್ವಾಮಿಜಿ ಅವರ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಆಟೋ ಮಾಲಿಕರು ಮತ್ತು ಚಾಲಕರ ಸಂಘದ ಮೋಹನ್ ಕುಮಾರ್, ಶೇಖರ್, ಹೆಚ್.ಕೆ. ದಿಲೀಪ್, ಇಂಡಿಯಾನ ಆಸ್ಪತ್ರೆಯ ಡಾ. ಅನೂಪ್, ಡಿವೈಎಸ್‌ಪಿ ಪರಮಶಿವಮೂರ್ತಿ, ನಗರಸಭೆ ಎಂಜಿನಿಯರ್ ಕವಿತಾ, ವಕೀಲ ಪ್ರಸನ್ನಕುಮಾರ್, ದೇವಿರಯ್ಯ, ಯು.ಎಸ್. ಮಲ್ಲಿಕಾರ್ಜುನ, ಕಟ್ಟಾಯ ಶಿವಕುಮಾರ್, ಹೆಚ್.ವಿ. ಹೇಮಂತ್, ಉಪಾಧ್ಯಕ್ಷ ಹೇಮೇಶ್ ಮತ್ತಿತರರಿದ್ದರು.

# ಅಪಘಾತದಲ್ಲಿ ಯುವಕ ಸಾವು

ಅರಕಲಗೂಡು: ತಾಲ್ಲೂಕಿನ ಕಾಳೇನಹಳ್ಳಿ ಕಸ ವಿಲೇವಾರಿ ಘಟಕದ ಸಮೀಪ ಬೈಕ್ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಕಾಳೇನಹಳ್ಳಿ ಗ್ರಾಮದ ಎನ್. ನಿಖಿಲ್ (28) ಮೃತ ಯುವಕ. ಯುಗಾದಿ ಹಬ್ಬದ ದಿನ ಕೇರಳಾಪುರ ಸಮೀಪ ಕಾವೇರಿ ನದಿಯಲ್ಲಿ ಪೂಜೆ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾಗ ಬೈಕ್ ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವ ಹಾಗೂ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಮೃತಪಟ್ಟಿದ್ದಾನೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪ್ರೇಮ ವಿವಾಹವಾಗಿದ್ದ ಮಹಿಳೆ ಗಂಡನ ಕಿರುಕುಳ ಸಹಿಸದೆ ಆತ್ಮಹತ್ಯೆ

ಬೇಲೂರು: ತಾಲ್ಲೂಕಿನ ಅಂಗಡಿಹಳ್ಳಿ ಗ್ರಾಮದಲ್ಲಿ ಮೂರು ತಿಂಗಳ ಹಿಂದಷ್ಟೇ ಪ್ರೀತಿಸಿ ಮದುವೆಯಾಗಿದ್ದ ಮಹಿಳೆ ಗಂಡನ ಕಿರುಕುಳ ಸಹಿಸಲಾಗದೆ ನೇಣಿಗೆ ಶರಣಾಗಿದ್ದಾರೆ.

ಗ್ರಾಮದ ಪ್ರಭಾವತಿ ಮೃತರು. ಅದೇ ಗ್ರಾಮದ ಕ್ರಿಸ್ ಶಂಕಿ ಎಂಬಾತನ ಜೊತೆಗೆ ಮೂರು ತಿಂಗಳ ಹಿಂದಷ್ಟೇ ವಿವಾಹವಾಗಿತ್ತು. ಪ್ರಭಾವತಿ ಹಾಗೂ ಕ್ರಿಸ್ ಶಂಕಿ ಪರಸ್ಪರ ಪ್ರೀತಿಸುತ್ತಿದ್ದರು. ಈ ವಿಚಾರ ಮನೆಯವರಿಗೆ ಗೊತ್ತಾಗಿ ಮದುವೆಗೆ ವಿರೋಧ ವ್ಯಕ್ತಪಡಿಸಿದ್ದರು. ಮಹಿಳೆಯನ್ನು ಪುಸಲಾಯಿಸಿ ಬೇರೆ ಕಡೆಗೆ ಕರೆದುಕೊಂಡು ಹೋಗಿ ಮದುವೆಯಾಗಿದ್ದ. ಎರಡು ತಿಂಗಳ ಹಿಂದೆ ಅಂಗಡಿಹಳ್ಳಿಗೆ ವಾಪಾಸ್ ಬಂದು ಪ್ರತ್ಯೇಕ ಮನೆ ಮಾಡಿಕೊಂಡಿದ್ದರು. ಪತಿ ಕ್ರಿಸ್ ಪದೆ ಪದೇ ಹೆಂಡತಿ ಜೊತೆಗೆ ಜಗಳ ಮಾಡುತ್ತಿದ್ದ ಎನ್ನಲಾಗಿದೆ.


ತವರು ಮನೆಯವರ ವಿರೋಧದ ನಡುವೆ ಮದೆಯಾದರೂ ಪತಿ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ಜಿಗುಪ್ಸೆಗೊಂಡಿದ್ದ ಪ್ರಭಾವತಿ ಮನೆಯಲ್ಲಿ ಯಾರೂ ಇಲ್ಲದಾಗ ನೇಣಿಗೆ ಶರಣಾಗಿದ್ದಾಳೆ ಎಂದು ತಿಳಿದುಬಂದಿದೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉಡುಸಲಮ್ಮ ದೇವಿ ಸ್ಥಿರಬಿಂಬ ಪ್ರತಿಷ್ಠಾಪನೆ

ಆಲೂರು: ತಾಲ್ಲೂಕಿನ ಕುಂದೂರು ಹೋಬಳಿ ಗರಿಘಟ್ಟ ಗ್ರಾಮದ ಶ್ರೀ ಉಡುಸಲಮ್ಮ ದೇವಿಯ ಸ್ಥಿರಬಿಂಬ ಪ್ರತಿಷ್ಠಾಪನೆ ಸಮಾರಂಭ ಏ. 3 ಮತ್ತು 4 ರಂದು ನೆರವೇರಲಿದೆ.

ಏ. 3ರ ಗುರುವಾರ ಗಂಗಾರಾಧನೆ, ಗಣಪತಿ ಪೂಜೆ, ಪಂಚಗವ್ಯ ಆರಾಧನೆ, ಕಳಶ ಆರಾಧನೆ, ಪಂಚಸೂಕ್ತ ಹೋಮ ನೆರವೇರಲಿದೆ. ಶುಕ್ರವಾರ ಸುಪ್ರಭಾತ ಸೇವೆ, ವೇದ ಪಾರಾಯಣ, ಕಳಶ ಆರಾಧನೆ, ಗಣಹೋಮ, ನವಗ್ರಹ ದುರ್ಗಾಹೋಮ, ಪ್ರಾಣ ಪ್ರತಿಷ್ಠೆ ಹೋಮ, ಮಹಾಪೂರ್ಣಾಹುತಿ, ಕುಂಭಾಭಿಷೇಕ, ಫಲ ಪಂಚಾಮೃತ ಅಭಿಷೇಕ, ಅಲಂಕಾರ, ಅಷ್ಟಾವಧಾನ ಸೇವೆ, ಸಹಸ್ರ ನಾಮಾರ್ಚನೆ, ಮಹಾ ಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗ ನೆರವೇರಲಿದೆ.

# ತಾಳ್ಮೆ ಮನುಷ್ಯನನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯುತ್ತೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಮಿತ ಮಾತು, ಸಜ್ಜನಿಕೆ ಹಾಗೂ ತಾಳ್ಮೆ ಮನುಷ್ಯನನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯುತ್ತದೆ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ಮೂಲಸ್ಥಾನ ಶ್ರೀ ಸ್ವರ್ಣ ಗೌರಮ್ಮದೇವಿ ದೇವಾಲಯದಲ್ಲಿ ಪ್ರತಿ ತಿಂಗಳು ನಡೆಯುವ ಅಮಾವಾಸ್ಯೆ ಪೂಜಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಮನುಷ್ಯನಿಗೆ ವಿದ್ಯೆ, ವಿನಯ, ಸಹಬಾಳ್ವೆಯ ಮನೋಭಾವ ಇರಬೇಕು ಹೊರತು ದುರಹಂಕಾರವಲ್ಲ. ನೀತಿ-ನಿಯತ್ತು ಮಾನವೀಯ ಸಂಬಂಧಗಳನ್ನು ಜೋಡಿಸುತ್ತವೆ. ವಿದ್ಯೆ ವಿನಯಕ್ಕೆ ಕಾರಣವಾಗಬೇಕಲ್ಲದೆ ದುರಹಂಕಾರಕ್ಕಲ್ಲ. ಒಳ್ಳೆಯ ಮಾತಿಗೆ ಬದುಕನ್ನು ಪರಿವರ್ತಿಸುವ ಶಕ್ತಿ ಇದೆ ಎಂದು ಹೇಳಿದರು.

ಮನುಷ್ಯನ ಜೀವನ ಉತ್ಸಾಹದಿಂದ ಕೂಡಿರಬೇಕು. ಜೀವನದಲ್ಲಿ ಉತ್ಸಾಹ ಇಲ್ಲದಿದ್ದರೆ ನೆಮ್ಮದಿ ಇಲ್ಲ. ಭಗವಂತ ನಿರ್ಮಿತವಾದ ಈ ಪ್ರಪಂಚದಲ್ಲಿ ಇರುವುದೆಲ್ಲವೂ ಅಮೂಲ್ಯ ಸಂಪತ್ತು. ಮನುಷ್ಯನ ಸಂಚಲನ ಮನಸ್ಸಿನ ಅಲೆ, ಹೊಯ್ದಾಟಕ್ಕೆ ಶಾಂತ ಪ್ರಶಾಂತಗೊಳಿಸುವ ಶಕ್ತಿ ಆಧ್ಯಾತ್ಮಕ್ಕಿದೆ.

ಮಹಾತ್ಮರು ಹಾಗೂ ಬಸವಾದಿ ಶಿವಶರಣರ ಮಾರ್ಗದರ್ಶನದಲ್ಲಿ ನಡೆದರೆ ಜೀವನ ವಿಕಸನಗೊಳ್ಳುತ್ತದೆ ಎಂದು ಸ್ವಾಮೀಜಿ ಹೇಳಿದರು.

ದಲಿತ ಸಮುದಾಯದ ಮುಖಂಡರಾದ ಎಂ.ಡಿ. ಸೋಮಶೇಖರ್, ಕಟ್ಲೆ ತಿಮ್ಮಯ್ಯ, ಚಂದ್ರಪ್ಪ ದಾಸಪ್ಪ ಮತ್ತಿತರರು ಸ್ವಾಮೀಜಿ ಅವರನ್ನು ಸನ್ಮಾನಿಸಿದರು. ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಎಸ್. ನಟರಾಜ್, ಎಂ.ಸಿ. ನಟರಾಜ್, ಎಸ್. ಮಲ್ಲಿಕಾರ್ಜುನಪ್ಪ, ಕೊಡ್ಲಿ ಬಸವರಾಜು, ಮಾಡಾಳು ಶಿವಲಿಂಗಪ್ಪ, ಕೋಡಿಮಠದ ಏಜೆಂಟ್ ಮಹದೇವಪ್ಪ ಗೌರೀಶ ಇದ್ದರು.

# ಸಿಲಿಂಡರ್ ಸ್ಫೋಟ: ಮಹಿಳೆ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಎಲ್.ಪಿ.ಜಿ ಸಿಲಿಂಡರ್ ಸ್ಫೋಟದಿಂದ ಗಂಭೀರ ಗಾಯಗೊಂಡಿದ್ದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೆ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ತಾಲ್ಲೂಕಿನ ಕೊಣನೂರು ಕುಂಚಿಟಗರ ಬೀದಿಯ ಮಂಗಳ (70) ಮೃತರು. ಭಾನುವಾರ ಮನೆಯಲ್ಲಿ ಅಡುಗೆ ಮಾಡುವಾಗ ಏಕಾಏಕಿ ಗ್ಯಾಸ್ ಸೋರಿಕೆಯಾಗಿ ಮೂವರು ಮಹಿಳೆಯರು ಗಾಯಗೊಂಡಿದ್ದರು. ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ



ದಾಖಲಿಸಲಾಗಿತ್ತು. ಅವಘಡದಲ್ಲಿ ಗಂಭೀರ ಗಾಯಗೊಂಡಿದ್ದ ಇಬ್ಬರು ಮಹಿಳೆಯರಿಗೆ ಚಿಕಿತ್ಸೆ ಮುಂದುವರೆದಿದೆ.

# ಸಮಸ್ಯಾತ್ಮಕ ಪಟ್ಟಿಯಲ್ಲಿ ಜಿಲ್ಲೆಯ 531 ಗ್ರಾಮಗಳು

## ಕುಡಿಯುವ ನೀರಿಗೆ ಹಾಹಾಕಾರ ಸಾಧ್ಯತೆ ಎಚ್ಚೆತ್ತುಕೊಂಡಿರುವ ಜಿ.ಪಂ.

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲಾದ್ಯಂತ ಬೇಸಿಗೆ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಮುನ್ನೆಚ್ಚರಿಕೆ ಕ್ರಮವಾಗಿ 531 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಎದುರಾಗುವ ಸಾಧ್ಯತೆಯನ್ನು ಜಿಲ್ಲಾ ಪಂಚಾಯಿತಿ ಅಂದಾಜು ಮಾಡಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಂದ ವರದಿ ತರಿಸಿಕೊಂಡಿರುವ ಮೇಲಧಿಕಾರಿಗಳು ಸಮಸ್ಯೆ ತಲೆ ತೋರದಂತೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಒಟ್ಟು 267 ಗ್ರಾಮ ಪಂಚಾಯಿತಿಗಳ ಪೈಕಿ 184 ಗ್ರಾ.ಪಂ.ನ 531 ಗ್ರಾಮಗಳನ್ನು ಸಮಸ್ಯಾತ್ಮಕ ಪಟ್ಟಿಗೆ ಸೇರಿಸಲಾಗಿದೆ.

ಆಲೂರು ತಾಲ್ಲೂಕಿನ 15 ಗ್ರಾಮ ಪಂಚಾಯಿತಿಯ 63, ಅರಕಲಗೂಡು ತಾಲ್ಲೂಕಿನ 66 ಗ್ರಾಮ, ಬೇಲೂರು 132, ಚನ್ನರಾಯಪಟ್ಟಣ 144, ಹಾಸನ 40, ಹೊಳೆನರಸೀಪುರ 42 ಹಾಗೂ ಸಕಲೇಶಪುರ ತಾಲ್ಲೂಕಿನ 44 ಗ್ರಾಮಗಳಲ್ಲಿ ನೀರಿಗೆ ಹಾಹಾಕಾರ ಎದುರಾಗುವ ಸಾಧ್ಯತೆಯಿದೆ.

ಆಲೂರಿನ 15, ಅರಕಲಗೂಡು ತಾಲ್ಲೂಕಿನ 29, ಬೇಲೂರು 36, ಚನ್ನರಾಯಪಟ್ಟಣ 41, ಹಾಸನ 21, ಹೊಳೆನರಸೀಪುರ 16, ಸಕಲೇಶಪುರ ತಾಲ್ಲೂಕಿನ 26 ಗ್ರಾಮ ಪಂಚಾಯಿತಿಗಳನ್ನು ಕುಡಿಯುವ ನೀರಿನ ಸಮಸ್ಯಾತ್ಮಕ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದರೆ ಅರಸೀಕೆರೆ ತಾಲ್ಲೂಕಿನ ಒಂದೇ ಒಂದು ಗ್ರಾಮ ಕುಡಿಯುವ ನೀರಿನ ಸಮಸ್ಯೆಗಳ ಪಟ್ಟಿಯಲ್ಲಿ ಇಲ್ಲದೇ ಇರುವುದು ಅಚ್ಚರಿ ಮೂಡಿಸಿದೆ. ಬಯಲು ಸೀಮೆ ಪ್ರದೇಶವಾದ ಅರಸೀಕೆರೆಯಲ್ಲಿ ಪ್ರತಿವರ್ಷ ಕುಡಿಯುವ ನೀರಿಗೆ ಹಾಹಾಕಾರ ಎದುರಾಗುತ್ತದೆ. ಟ್ಯಾಂಕರ್ ಮೂಲಕ ನೀರು



ಕಲ್ಪಿಸುವುದು ಸರ್ವೇ ಸಾಮಾನ್ಯ. ಆದರೆ ಈ ಬಾರಿ ಮಾತ್ರ ಸಮಸ್ಯೆಯೇ ಇಲ್ಲ ಎಂದು ಅಧಿಕಾರಿಗಳು ವರದಿ ಕೊಟ್ಟಿದ್ದಾರೆ.

2023-24ನೇ ಸಾಲಿನಲ್ಲಿ ಅರಕಲಗೂಡು ತಾಲ್ಲೂಕಿನ ವಿಜಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುದಿಗೆರೆ, ಮೋಕಳಿ ಗ್ರಾ.ಪಂ.ನ ಮಡಿಕೆಹೊಸಹಳ್ಳಿ, ದೊಡ್ಡಬೆಮ್ಮತ್ತಿ ಗ್ರಾ.ಪಂ.ನ ಮಾರಗೋಡನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉತ್ತೇನಹಳ್ಳಿ, ತಗಡೂರು ಗ್ರಾ.ಪಂ.ನ ಬೂವನಹಳ್ಳಿ ಹಾಗು ಗೌಡಗೆರೆ ಗ್ರಾ.ಪಂ.ಗೆ ಒಳಪಡುವ ಮಲ್ಲಮನಘಟ್ಟ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲಾಗಿತ್ತು. ಈ ವರ್ಷ ಮಾರ್ಚ್ ಕಳೆದು ಏಪ್ರಿಲ್ ಆರಂಭವಾಗಿರುವುದು ಮಾತ್ರವಲ್ಲದೆ ಬಿಸಿಲ ಬೇಗೆಯೂ ಹೆಚ್ಚಿದೆ. ಇಲ್ಲಿವರೆಗೆ ಎಲ್ಲಿಯೂ ಕೂಡ ಕುಡಿಯುವ ನೀರಿಗೆ ಸಮಸ್ಯೆ ಕಂಡುಬಂದಿಲ್ಲ. ಅವಶ್ಯಕತೆ ಇರುವ ಕಡೆಗಳಲ್ಲಿ ಹತ್ತಿರದ ಬೋರವೆಲ್ ಮೂಲಕ ನೀರು ಪೂರೈಕೆಯನ್ನು ಗ್ರಾಮ ಪಂಚಾಯಿತಿ ಮೂಲಕ ಮಾಡಲಾಗುತ್ತಿದೆ.

### ಬತ್ತುತ್ತಿದೆ ಜಲಮೂಲ

ಕಳೆದ ಎರಡ್ಮೂರು ವರ್ಷಗಳಿಂದ ಉತ್ತಮ ಮಳೆಯಾಗಿರುವುದು ಹಾಗೂ ನರೇಗಾ ಯೋಜನೆಯಡಿ ಕೆರೆಕಟ್ಟೆಗಳ ಪುನಶ್ಚೇತನ ಕಾಯ ನಡೆದಿರುವುದರಿಂದ ಗ್ರಾಮೀಣ ಭಾಗದಲ್ಲಿ ಅಂತರ್ಜಲ ಮಟ್ಟ ವೃದ್ಧಿಯಾಗಿದೆ. ಜಾನುವಾರುಗಳ ಕುಡಿಯುವ ಮತ್ತು ಮನೆ ಬಳಕೆಗೆ ನೀರಿಗೆ ಸಮಸ್ಯೆಯಾಗಿಲ್ಲ. ಆದರೆ ಕಳೆದ ಕೆಲವು ದಿನಗಳಿಂದ ಕೆರೆಗಳ ನೀರು ಬತ್ತಿ ಹೋಗುತ್ತಿದ್ದು ಕೊಳವೆ ಬಾವಿಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗುತ್ತಿದೆ. ಹೀಗಾಗಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸಿದ್ಧತೆಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಾಡುತ್ತಿದ್ದಾರೆ.

### ಜೆಜೆಎಂ ಕಾಮಗಾರಿ

ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಒದಗಿಸಬೇಕೆಂಬ ಉದ್ದೇಶದಿಂದ ಅನುಷ್ಠಾನಗೊಳಿಸಲಾದ ಜಲ ಜೀವನ್ ಮಿಷನ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಗ್ರಾಮೀಣ ಭಾಗದಲ್ಲಿ ನೀರಿನ ಅಭಾವ ಸೃಷ್ಟಿಯಾಗುವುದಿಲ್ಲ ಎಂಬ ನಂಬಿಕೆ ಅಧಿಕಾರಿಗಳದ್ದಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಹಂತ ಹಂತವಾಗಿ ಕಾಮಗಾರಿ ಕೈಗೊಂಡಿದ್ದು ಇದುವರೆಗೆ 437.70 ಕೋಟಿ ರೂ. ಖರ್ಚಾಗಿದೆ.

# ಶ್ರದ್ಧಾ ಭಕ್ತಿಯಿಂದ ರಂಜಾನ್ ಆಚರಣೆ



ಚನ್ನರಾಯಪಟ್ಟಣ: ತಾಲ್ಲೂಕಿನಾದ್ಯಂತ ಮುಸ್ಲಿಮರು ಸೋಮವಾರ ಶ್ರದ್ಧಾ-ಭಕ್ತಿಯೊಂದಿಗೆ ಸಂಭ್ರಮದಿಂದ ಈದ್ ಉಲ್ ಫಿತ್ ಆಚರಿಸಿದರು.

ಪಟ್ಟಣದ ಬಾಗೂರು ರಸ್ತೆಯಲ್ಲಿರುವ ಈದ್ಗಾ ಮೈದಾನದ ಆವರಣದಲ್ಲಿ ಸಾವಿರಾರು ಮುಸಲ್ಮಾನರು ರಂಜಾನ್ ಕೊನೆಯ ದಿನದ ಪ್ರಾರ್ಥನೆ ಸಲ್ಲಿಸಿದರು. ಮುಸ್ಲಿಮರ ಪವಿತ್ರ ಮಾಸ ರಂಜಾನ್ ಭಾನುವಾರ ಮುಗಿದಿದೆ. ಸೋಮವಾರ ಶವ್ವಲ್ ಮೊದಲನೇ ದಿನದಂದು ಈದ್ ಉಲ್ ಫಿತ್ ಹಬ್ಬ ಆಚರಿಸಿದರು. ಬೆಳಗ್ಗೆಯಿಂದಲೇ ಈದ್ಗಾ ಮೈದಾನಕ್ಕೆ ತೆರಳಿದ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಧರ್ಮ ಗುರುಗಳು ಹಬ್ಬದ ಸಂದೇಶ ಸಾರಿ, ದಾನ-ಧರ್ಮದ ಮಹತ್ವ ಕುರಿತು ಬೋಧಿಸಿದರು. ಸಮಾಜದಲ್ಲಿ ಎಲ್ಲರೊಂದಿಗೂ ಸಹೋದರರಂತೆ ಬಾಳುವಂತೆ ಕರೆ ನೀಡಿದರು.

ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಬಳಿಕ ಪರಸ್ಪರ ಆಲಂಗಿಸಿ ಹಬ್ಬದ ಶುಭಾಶಯ ಕೋರಿದರು. ಪ್ರಾರ್ಥನಾ ಸ್ಥಳದಲ್ಲಿ ಶಾಸಕ ಸಿ.ಎನ್. ಬಾಲಕೃಷ್ಣ, ಪುರಸಭಾ ಅಧ್ಯಕ್ಷ ಸಿ.ಎನ್. ಮೋಹನ್, ಸದಸ್ಯರಾದ ಕವಿತಾ ರಾಜು, ಫಾರ್ಹ ಅನ್ಸರ್ ಪಾಷ, ಚೌಕ್ ಮಸೀದಿ ಆಡಳಿತ ಅಧಿಕಾರಿಗಳಾದ ಶಮಿಲ್ ಪಾಷ, ಮುನೋಹರ್, ಮುಖಂಡರಾದ ಜಬೀವುಲ್ಲಾ ಬೇಗ್, ಸಾಯಿದ್ ಅಹ್ಮದ್, ಮುಕ್ತರ್ ಪಾಷ, ಅಪ್ಸರ್ ಪಾಷ, ಚಾಂದ್ ಪಾಷ, ತಾನೀಮ್ ಪಾಷ, ಪುರಸಭಾ ಅಧ್ಯಕ್ಷ ಅನ್ಸಾರ್ ಬೇಗ್, ಮಾಜಿ ಸದಸ್ಯ ಅನ್ಸಾರ್ ಬೇಗ್ ಇತರರು ಇದ್ದರು.

# ಬಾಗೀವಾಳು ಗ್ರಾಮದಲ್ಲಿ ಕರಗ ಉತ್ಸವ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ಬಾಗೀವಾಳು ಮತ್ತು ಕಡವಿನಹೊಸಹಳ್ಳಿ ಗ್ರಾಮದಲ್ಲಿ ಸುತ್ತಲಿನ ಹತ್ತಾರು ಗ್ರಾಮಸ್ಥರು ಒಟ್ಟಾಗಿ ಮಾಡುವ ಕರಗ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪವಿತ್ರ ಹೇಮಾವತಿಯಲ್ಲಿ ಗಂಗೆ ಪೂಜೆ ನೆರವೇರಿಸಿದ ನಂತರ ಬಾಗೀವಾಳು ಗ್ರಾಮದ ಶ್ರೀರಾಮೇಶ್ವರ ದೇವಾಲಯ ಪ್ರದಕ್ಷಿಣೆಯೊಂದಿಗೆ ಕರಗ ಸೇವೆ ಆರಂಭವಾಯಿತು. ನಂತರ ಕಡವಿನಹೊಸಹಳ್ಳಿ ಗ್ರಾಮದೇವತೆ, ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಶ್ರೀ ಆಂಜನೇಯ ದೇಗುಲ ಸಮುಚ್ಛಯದ ಪ್ರದೇಶದ ಆವರಣದಲ್ಲಿ ಕರಗ ನಡೆಸಲಾಯಿತು.

ಪ್ರತಿ ಯುಗಾದಿ ದಿನದ ಸಂಜೆ ವೇಳೆಗೆ ಹಬ್ಬದ ಸವಿಯೂಟ ನಡೆಸಿದ ಪಟ್ಟಣ ಸೇರಿದಂತೆ ಹಲವು ಗ್ರಾಮಗಳ ಭಕ್ತರು ಕರಗ ವೀಕ್ಷಿಸಿದರು. ಬಾಗೀವಾಳು ಮತ್ತು ಕಡವಿನಹೊಸಹಳ್ಳಿ ಗ್ರಾಮದಲ್ಲಿ ಮೈನವಿರೇಳಿಸುವ ಕರಗ ವೀಕ್ಷಣೆ ವರ್ಷಆರಂಭದ ಹರ್ಷಚಿತ್ತ ಮನೋಭಾವದಿಂದ ಕೂಡಿರುತ್ತದೆ. ಭಕ್ತಿ, ಭಾವದಿಂದ ಈ ಬಾರಿಯೂ ವೇ. ಚಂದ್ರಶೇಖರ್ ಕರಗ ಹೊತ್ತು, ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿ ಗ್ರಾಮದ ದೇವಾಲಯಗಳನ್ನು ಪ್ರದಕ್ಷಿಣೆ ಹಾಕಿದರು. ಕರಗ ಸೇವೆ ನಡೆಸುವಾತ ಕಳೆದ 21 ದಿನ ಪರ್ಯಂತವಾಗಿ ಉಪವಾಸ, ಪೂಜೆ ಹೀಗೆ ವ್ರತಾಚರಣೆಯಲ್ಲಿ ತೊಡಗಿರುತ್ತಾರೆ. ಪುರಾತನ ಕಾಲದಿಂದಲೂ ವಂಶಪಾರಂಪರ್ಯವಾಗಿ ಕರಗ ಸೇವೆ ನಡೆಸುವ ಪ್ರತೀತಿ ನಡೆದಿದೆ. ಪಟ್ಟಣ ಸೇರಿದಂತೆ ಹಳೇಕೋಟೆ, ಮಲ್ಲೇಶಪುರ, ಕಡವಿನಕೋಟೆ ಗ್ರಾಮಸ್ಥರೂ ಸಹ ಕರಗ ವೀಕ್ಷಣೆಗೆ ಸಾವಿರಾರು ಜನರು ಕರಗ ವೀಕ್ಷಿಸಿ, ದೇವಾಲಯದಲ್ಲಿ ಪೂಜೆ ಸಲ್ಲಿಸಿ ನೂತನ ಸಂವತ್ಸರದ ಸಂಭ್ರಮದಲ್ಲಿ ಭಾಗಿಯಾದರು. ಬೋಳು ತಲೆಯ ಮೇಲೆ ಗಂಧಲೇಪಿಸಿ ಕರಗ ಹೊತ್ತು ಕುಣಿಯುವ ಪರಿ ಭಕ್ತಿಯ ಪರಾಕಾಷ್ಠೆಯೇ ಸರಿ. ಕೈಯಲ್ಲಿ ಕತ್ತಿ ಹಿಡಿದು ವಾದ್ಯಕ್ಕೆ ತಕ್ಕಂತೆ ಕರಗ ಹೊತ್ತು ಸರ, ಸರ ಹೆಜ್ಜೆ ಹಾಕಿರುವ ಸೇವಾರ್ಥದಾರನ ತಲೆಯಿಂದ ಕರಗದ ಕಳಸ ಜಾರಿದಂತೆ ಎಚ್ಚರವಹಿಸಿಯೇ ಇರುತ್ತಾರೆ. ಭಕ್ತರ ಹರ್ಷೋದ್ಗಾರದೊಂದಿಗೆ ಕರಗಕ್ಕೆ ಕಾಣಿಕೆ ಸಮರ್ಪಿಸಿ, ದೇವಾಲಯಕ್ಕೆ ನಮಿಸುವರು. ಒಟ್ಟಾರೆ ಗ್ರಾಮಗಳ ನಡುವೆ ಹಬ್ಬದ ದಿನದಂದು ಧಾರ್ಮಿಕ ಆಚರಣೆಯಲ್ಲಿ ತೊಡಗುವ ಮೂಲಕ ಸೌಹಾರ್ದತೆ ಮೂಡಿಸುವುದು ಕರಗದ ವೈಶಿಷ್ಟ್ಯವಾಗಿದೆ.

# ವಿಶೇಷ ಶಕ್ತಿಗೆ ಚಾರುಕೀರ್ತಿ ಭಟ್ಟಾರಕ ಶ್ರೀ ಸಾಕ್ಷಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಶ್ರೀಗಳಲ್ಲಿ ಎಲ್ಲರನ್ನೂ ಸೆಳೆಯುವ, ಆಕರ್ಷಿಸುವ ಗುರುತ್ವಾಕರ್ಷಣಾ ಶಕ್ತಿ ಇತ್ತು ಎಂದು ಶ್ರೀ ಮಠದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಶ್ರವಣಬೆಳಗೊಳದ ಶ್ರೀ ಮಠದಲ್ಲಿ ಪೂರ್ವ ಭಟ್ಟಾರಕ ಶ್ರೀಗಳವರ ನಿಷಿಧಿ ಮಂಟಪದಲ್ಲಿ ಸೋಮವಾರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಚರಣಪೂಜೆ, ಫಲಪುಷ್ಪ ಸಮರ್ಪಣೆ, ಅಷ್ಟಾವಿಧಾರ್ಚನೆ ಬಳಿಕ ನಡೆದ ವಿನಯಾಂಜಲಿ ಸಭೆಯಲ್ಲಿ ಅವರು ಮಾತನಾಡಿದರು.

ಶ್ರೀಗಳು ದೇಶದ ಜೈನ ಸಮಾಜದ ಗುರುಗಳು, ಮಾರ್ಗದರ್ಶಕರಾಗಿದ್ದರು, ಉತ್ತರ-ದಕ್ಷಿಣ ಜೈನ ಸಮಾಜದ ಸೇತುವೆ ಆಗಿದ್ದರು. ಬೆಳಗೊಳವನ್ನು ಉತ್ತುಂಗಕ್ಕೇರಿಸಿ, ದೇಶ-ವಿದೇಶಗಳಲ್ಲಿ ತನ್ನದೇ ಸ್ಥಾನ ಪಡೆಯುವಂತೆ ಮಾಡಿದವರು, ಭಗವಾನ್



ಶ್ರೀ ಬಾಹುಬಲಿ ಸ್ವಾಮಿಯ ಸಂದೇಶವನ್ನು ಮನೆ-ಮನಗಳಿಗೆ ತಲುಪಿಸಿದ ಪ್ರಾತಃ ಸ್ಮರಣೀಯರು ಎಂದರು.

ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನಾವೆಲ್ಲರೂ ಸೇರಿ ಗುರುಗಳಿಗೆ ಭಕ್ತಿ ಸಮರ್ಪಣೆ ಮಾಡಿದ್ದೇವೆ. ಶ್ರೀಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಬರೆಯಲು ಕುಳಿತರೆ ಪುಟಗಳೇ ಸಾಲದು, ಅಂತಹ ಮೇರು ವ್ಯಕ್ತಿತ್ವ ಶ್ರೀಗಳದ್ದಾಗಿತ್ತು ಎಂದರು.

ಗುರುವಾದವನಿಗೆ ಗುರುತ್ವಾಕರ್ಷಣ ಶಕ್ತಿ ಇರಬೇಕೆಂದು ಆಗಾಗ ಸ್ವಾಮೀಜಿ ಹೇಳುತ್ತಿದ್ದರು. ಅಂತಹ ಶಕ್ತಿ ಅವರಲ್ಲಿತ್ತು, ಆ ಕಾರಣದಿಂದಲೇ ಪರಮಪೂಜ್ಯರು ಶಿಷ್ಯರು, ಭಕ್ತರು, ರಾಜಕಾರಣಿಗಳು ಸೇರಿದಂತೆ ಎಲ್ಲರನ್ನೂ ಆಕರ್ಷಿಸುತ್ತಿದ್ದರು ಎಂದು ನುಡಿದರು.

ತಮ್ಮ ದೀಕ್ಷಾ ಸಂದರ್ಭದಲ್ಲಿ ಅನೇಕ ಸಲ ನಾನು ವಾಪಸ್ ಹೋಗಬೇಕು ಅನ್ನಿಸಿದ್ದು ಉಂಟು, ಆದರೆ ಶ್ರೀಗಳನ್ನು ಎದುರುಗೊಂಡ ತಕ್ಷಣ, ಹತ್ತಿರ ಹೋದಾಗ ಬಿಟ್ಟು ಹೋಗಬೇಕು ಅನ್ನಿಸಲಿಲ್ಲ. ಆ ಮೂರು ತಿಂಗಳು ಶ್ರೀಗಳಿಂದ ತಾವು ಪಡೆದಿದ್ದು, 30 ವರ್ಷಕ್ಕೆ ಆಗಲಿದೆ, ಅಷ್ಟು ಆಶೀರ್ವಾದ ಮಾಡಿದ್ದಾರೆ ಎಂದರು.

ಶ್ರೀ ಕ್ಷೇತ್ರವನ್ನು ದೇಶ ಮಾತ್ರವಲ್ಲದೆ ವಿದೇಶಕ್ಕೂ ತಮ್ಮದೇ ಸಂದೇಶಗಳ ಮೂಲಕ ಪರಿಚಯಿಸಿದರು. ರಾಜಮನೆತನ, ಸರ್ಕಾರಗಳನ್ನು ಆಕರ್ಷಿಸಿ ಕ್ಷೇತ್ರಕ್ಕೆ ಆಗಬೇಕಾದ ಕೆಲಸ ಮಾಡಿಸುವ ಮೂಲಕ ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಮಹನೀಯರು ಎಂದು ಸ್ಮರಿಸಿದರು.

2 ವರ್ಷದಲ್ಲಿ ನಾವು ಏನೇ ಮಾಡಿದ್ದರೂ, ಅವರ ಆಶೀರ್ವಾದ, ಅನುಗ್ರಹ ಇದೆ ಎಂದುಕೊಂಡೇ ಮುನ್ನಡೆಯುತ್ತಿದ್ದೇವೆ ಎಂದರು. ಇದೇ ವೇಳೆ ನಿಷಿಧಿ ಮಂಟಪ, ಸೋಪಾನ ಮೆಟ್ಟಿಲು, ಸ್ವಾಗತ ಕಮಾನು ನಿರ್ಮಾಣ ಮಾಡಿದವರನ್ನು ಅಭಿನಂದಿಸಲಾಯಿತು.

ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಸ್ವಸ್ತಿಶ್ರೀ ಭಟ್ಟಾರಕ ಸ್ವಾಮೀಜಿ ಅವರು ದೈಹಿಕವಾಗಿ ನಮ್ಮ ನಡುವೆ ಇಲ್ಲ. ಆದರೆ ದೇವರ ಸ್ವರೂಪಿಯಾಗಿ ಎಲ್ಲರ ಹೃದಯದಲ್ಲಿ ನೆಲೆಸಿದ್ದಾರೆ ಎಂದರು. ಶ್ರೀ ಕ್ಷೇತ್ರವನ್ನು ಜಗತ್ತಿಗೆ ಪರಿಚಯಿಸಿ, ಕ್ಷೇತ್ರದ ಹಿರಿಮೆ-ಗರಿಮೆ ಉನ್ನತೀಕರಣ ಮಾಡಿದವರು, 4 ಮಸ್ತಕಾಭಿಷೇಕ, 81 ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳವನ್ನು ಯಶಸ್ವಿಯಾಗಿ ಸಾಕಾರಗೊಳಿಸಿ, ನಾಡಿಗೆ, ದೇಶಕ್ಕೆ, ಪ್ರಪಂಚಕ್ಕೆ ಸಂದೇಶ ನೀಡಿದವರು. ಸರ್ವ ಧರ್ಮೀಯರನ್ನೂ ಪ್ರೀತಿಸಿ, ಗೌರವಿಸಿ,ಆದರಿಸಿ, ಕ್ಷೇತ್ರದ ಗೌರವ ಹೆಚ್ಚು ಮಾಡಿದವರು ಎಂದರು.

ಅವರ ಕಾರ್ಯ ತತ್ಪರತೆ, ಮುಂದಾಲೋಚನೆಯನ್ನು ಬೇರೆ ಯಾರಿಗೂ ಹೋಲಿಸಲು ಸಾಧ್ಯವಿಲ್ಲ. ಅವರ ಕಾರ್ಯವಿಧಾನದ ಬಗ್ಗೆ ನಾವೆಲ್ಲರೂ ತುಂಬಾ ಕಲಿಯುವುದು ಬಹಳ ಇದೆ. ಧಾರ್ಮಿಕ, ಆರೋಗ್ಯ, ಸಮಾಜ ಮುಖಿಯಾಗಿ ಕ್ಷೇತ್ರವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದರು. ಸ್ವಾರ್ಥರಹಿತ ಯಾವುದಾದರೂ ಧಾರ್ಮಿಕ ಕ್ಷೇತ್ರ ಇದ್ದರೆ ಅದು ಶ್ರವಣಬೆಳಗೊಳ, ಇದಕ್ಕೆ ಕಾರಣ ಶ್ರೀಗಳು ಎಂದರು.

ಕಾರ್ಯಕ್ರಮದಲ್ಲಿ ಕಂಬದಹಳ್ಳಿ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ ಸೇರಿದಂತೆ ಸಮಸ್ತ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದು ಪರಮಪೂಜ್ಯರ ಸ್ಮರಿಸಿ ಗೌರವ ನಮನ ಸಲ್ಲಿಸಿದರು.

# ಕೊಣನೂರು ಆಸ್ಪತ್ರೆಗೆ ಬೇಕಿದೆ ಕಾಯಂ ಅಂಬುಲೆನ್ಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಕೊಣನೂರು: ತುರ್ತು ಚಿಕಿತ್ಸೆಯ ಅವಶ್ಯಕತೆಯಿದ್ದಾಗ ಕರೆ ಮಾಡಿದರೆ 108 ಅಂಬುಲೆನ್ಸ್ ಬರುತ್ತದೆಂಬ ಭರವಸೆಯಲ್ಲಿದ್ದ ಹೋಬಳಿಯ ಜನರಿಗೆ ಕಳೆದ ಎರಡು ವರ್ಷದಿಂದ ಆ ಸೌಲಭ್ಯ ಇಲ್ಲದಂತಾಗಿದೆ.

ಕೊಣನೂರು ಪಟ್ಟಣ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇದ್ದ ಅಂಬುಲೆನ್ಸ್ ಎರಡು ವರ್ಷಗಳ ಹಿಂದೆ ಕೆಟ್ಟಿದ್ದು ರಿಪೇರಿ ಮಾಡಿಸಿ ಸಾರ್ವಜನಿಕ ಸೇವೆಗೆ ಒದಗಿಸಬೇಕೆಂಬ ಕನಿಷ್ಠ ಕಾಳಜಿ ಆರೋಗ್ಯ ಇಲಾಖೆ ಅಥವಾ ಜನಪ್ರತಿನಿಧಿಗಳಿಗೆ ಇಲ್ಲವಾಗಿದೆ. ಅದರಿಂದ ಸುತ್ತಲಿನ ಹಳ್ಳಿಯ ಜನರು ಪರದಾಡುತ್ತಿದ್ದಾರೆ. ಅಪಘಾತ, ಹೆರಿಗೆ, ಗಂಭೀರ ಆರೋಗ್ಯ ಸಮಸ್ಯೆಗೆ ತುತ್ತಾದಾಗ ಖಾಸಗಿ ಅಂಬುಲೆನ್ಗಳ ಹಣದಾಹಕ್ಕೆ ಬಲಿಯಾಗಬೇಕು. ಇಲ್ಲವಾದರೆ ಸಾವಿನ ಕದ ತಟ್ಟಬೇಕು ಎಂಬ ಪರಿಸ್ಥಿತಿ ಇಲ್ಲಿನ ಬಡಜನರದ್ದಾಗಿದೆ. ಕೃಷಿ, ಕೂಲಿ ಕಾಯಕವನ್ನೇ ನೆಚ್ಚಿಕೊಂಡಿರುವ ಗ್ರಾಮೀಣ ಜನರು ಆ್ಯಂಬುಲೆನ್ಸ್ ಸೇವೆ ಇಲ್ಲದೆ ಖಾಸಗಿ ವಾಹನಗಳನ್ನೇ ಅವಲಂಬಿಸಿದ್ದು, ಅವರು ಹಣದಾಸೆಗಾಗಿ ರೋಗಿಗಳಿಗೆ ಇಲ್ಲದ




### ಖಾಸಗಿಯವರದ್ದೇ ದರ್ಬಾರ್

ಪಟ್ಟಣದಲ್ಲಿ ಮೂರು ಖಾಸಗಿ ಅಂಬುಲೆನ್ಸ್‌ಗಳಿದ್ದು ಯಾವಾಗಲೂ ಆಸ್ಪತ್ರೆ ಮುಂದೆಯೇ ನಿಂತಿರುತ್ತವೆ. ರೋಗಿಗಳಿಗೆ ಸರ್ಕಾರಿ ಅಂಬುಲೆನ್ಸ್ ಬೇಕೆಂದರೆ ಅರಕಲಗೂಡು ಆಸ್ಪತ್ರೆ ಸಂಪರ್ಕಿಸಬೇಕು. ಇಲ್ಲವಾದರೆ ಮೈಸೂರು ಜಿಲ್ಲೆಯ ಬಸವನಾಳು ಹಾಗೂ ಕಣಗಾಲ್ ಗ್ರಾಮದ ಸಮುದಾಯ ಆಸ್ಪತ್ರೆಯವರನ್ನು ಸಂಪರ್ಕಿಸಬೇಕು. ಖಾಸಗಿಯವರು ಹೇಳುವಷ್ಟು ಹಣ ಕೊಟ್ಟು ರೋಗಿಗಳನ್ನು ಕರೆದೊಯ್ಯಬೇಕು. ಖಾಸಗಿ ಅಂಬುಲೆನ್ಸ್‌ನವರದ್ದೇ ದರ್ಬಾರ್ ಎನ್ನುವಂತಾಗಿದೆ ಇಲ್ಲಿನ ಪರಿಸ್ಥಿತಿ.

ಭಯ ಹುಟ್ಟಿಸಿ ಹಾಸನ, ಮೈಸೂರಿನಂತಹ ದೊಡ್ಡ ಆಸ್ಪತ್ರೆಗಳಿಗೆ ದಾಖಲಾಗುವಂತೆ ಮಾಡುತ್ತಿದ್ದಾರೆ. ಕೊಣನೂರಿನಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆಯಿದ್ದರೂ ಜ್ವರ, ಶೀತ, ತಲೆನೋವಿನಂತಹ ರೋಗಿಗಳಿಗೆ ಮಾತ್ರೆ ಕೊಡುವುದಕ್ಕಾಗಿ ಮಾತ್ರ ಸೀಮಿತವಾಗಿದೆ.

ಭಾನುವಾರ ಪಟ್ಟಣದ ಗೌಡರ ಬೀದಿಯಲ್ಲಿ ಅಡುಗೆ ಮನೆಯ ಸಿಲಿಂಡರ್ ಸ್ಫೋಟದಿಂದ ಮೂವರು ಮಹಿಳೆಯರು ಗಾಯಗೊಂಡಿದ್ದರು. ಅವರನ್ನು ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ತಿಳಿಸಿದರು. ಆದರೆ ಆ್ಯಂಬುಲೆನ್ಸ್ ಇಲ್ಲದೆ ಗಾಯಾಳುಗಳು ಪರದಾಡಬೇಕಾಯಿತು. ನಂತರ ಅರಕಲಗೂಡಿನಲ್ಲಿ ನಿಂತಿದ್ದ 108 ಅಂಬುಲೆನ್ಸ್ ಕರೆಸಿ ಕಳುಹಿಸಿಕೊಡಲಾಯಿತು. ನಂತರ ಅದೇ ಸಮಯಕ್ಕೆ ಕಾಳೇನಹಳ್ಳಿ ಗ್ರಾಮದಲ್ಲಿ ಬೈಕ್ ಅಪಘಾತದಲ್ಲಿ ಯುವಕ ಮೃತಪಟ್ಟಿದ್ದ. ಆತನ ಮೃತದೇಹವನ್ನು ಆಸ್ಪತ್ರೆಗೆ ಕರೆತರಲು ಅಂಬುಲೆನ್ಸ್ ಇರಲಿಲ್ಲ. ಸಿಲಿಂಡರ್ ಸ್ಫೋಟದಿಂದ ಗಾಯಗೊಂಡಿದ್ದವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಬಿಡಲು ಹೋಗಿದ್ದ ಅಂಬುಲೆನ್ಸ್‌ನಲ್ಲೇ ವಾಪಸ್ ಬರುವಾಗ ಕಾಳೇನಹಳ್ಳಿ ಸಮೀಪ ಮೃತಪಟ್ಟಿದ್ದ ಯುವಕನ ಶವವನ್ನು ಕರೆತರಬೇಕಾಯಿತು. ಇಂತಹ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಒಂದು ಕಾಯಂ ಅಂಬುಲೆನ್ಸ್ ಇದ್ದಿದ್ದರೆ ಗಾಯಾಳುಗಳು ಪರದಾಡುತ್ತಿರಲಿಲ್ಲ ಹಾಗೂ ಮೃತದೇಹ ರಸ್ತೆಯಲ್ಲಿ ಗಂಟೆಗೂ ಹೆಚ್ಚು ಕಾಲ ಇರುತ್ತಿರಲಿಲ್ಲ. ಪರಿಸ್ಥಿತಿ ಇಷ್ಟೆಲ್ಲಾ ಬಿಗಡಾಯಿಸಿದರೂ ಸಂಬಂಧಪಟ್ಟವರು ಯಾರೂ ಗಮನ ಹರಿಸುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಸಿನಿಮಾ ನಟರ ಮೂಲ ಬೇರು ರಂಗಭೂಮಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸಿನಿಮಾ ಕ್ಷೇತ್ರದಲ್ಲಿ ಉನ್ನತ ಹೆಸರು ಗಳಿಸಿದವರಿಗೆಲ್ಲ ರಂಗಭೂಮಿಯೇ ಮೂಲ ಬೇರು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು.

ಪಟ್ಟಣದ ಅನಿಕೇತನ ಕಿರುರಂಗ ಮಂದಿರದಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ವತಿಯಿಂದ ಮೂಡಲಪಾಯ ಬಯಲಾಟ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರದರ್ಶನ- ಸಂವಾದ-ಹಾಡುಗಾರಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡಾ. ರಾಜಕುಮಾರ್ ಅವರು ರಂಗಭೂಮಿಯ ಹಿನ್ನೆಲೆಯಲ್ಲಿ ಬಂದದ್ದರಿಂದಲೇ ಅವರ ಹೆಸರು ಕಲೆ, ಅಜರಾಮರವಾಗಿದೆ. ಕರ್ನಾಟಕ ಬಯಲಾಟ ಅಕಾಡೆಮಿಯಿಂದ ಸ್ಥಳೀಯ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸುವ ಕ್ರಿಯಾಶೀಲ ಚಟುವಟಿಕೆಗಳ ಪ್ರತೀಕವೇ ಈ ಕಾರ್ಯಕ್ರಮ. ನಮ್ಮ ಪೂರ್ವಜರ ಸಂಸ್ಕೃತಿಯ ಸೊಗಡು ಉಳಿಯುವಂತಾಗಲಿ ಎಂದರು.

ಕರ್ನಾಟಕವು ಕಲೆ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತ ರಾಜ್ಯವಾಗಿದ್ದು, ಇಲ್ಲಿ ಸಾವಿರಾರು ಜನಪದ ಕಲೆಗಳು ಒಬ್ಬರಿಂದ ಒಬ್ಬರಿಗೆ



ಮೌಖಿಕವಾಗಿ ಸಾಗುತ್ತಾ ಬಂದಿವೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರಗಳಲ್ಲಿ ಜಾನಪದ ಕಲೆ ಉಳಿಸಿ, ಬೆಳೆಸುವ ಜವಾಬ್ದಾರಿ ಯುವಜನತೆಯ ಮೇಲಿದೆ. ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಕಾಡೆಮಿಯಿಂದ ಬಯಲಾಟ ಸಂಭ್ರಮ ಕಾರ್ಯಕ್ರಮ ರೂಪಿಸಲಾಗಿದೆ.


ಇದರ ಮೂಲಕ ವಿವಿಧ ಕಲೆಗಳನ್ನು ಪ್ರದರ್ಶಿಸುವ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಮಾತನಾಡಿ, ವಿಜ್ಞಾನ, -ತಂತ್ರಜ್ಞಾನ ಮತ್ತು ಜಾಗತೀಕರಣದ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿರುವ ಮನುಷ್ಯನ ಮನಸ್ಸಿಗೆ ನೆಮ್ಮದಿ ನೀಡುವ ಶಕ್ತಿ ಜಾನಪದ ಕಲೆಯಲ್ಲಿ ಅಡಗಿದೆ. ಆಧುನಿಕತೆಯ ಭರಾಟೆಗೆ ಸಿಲುಕಿ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಕಣ್ಮರೆಗೆ ಸರಿಯುತ್ತಿರುವ ಜಾನಪದ ಕಲೆ ಉಳಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಾರ್ಯಕ್ರಮ ಆಯೋಜಿಸಿರುವುದು ಸ್ವಾಗತಾರ್ಹ. ನಶಿಸಿ ಹೋಗುತ್ತಿರುವ ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡಿ ಜನಪದ ಕಲೆ ಉಳಿಸುವ ನಿಟ್ಟಿನಲ್ಲಿ ಹಳ್ಳಿಗಳಲ್ಲಿ ಜನಪದ ಕಲಾವಿದರನ್ನು ಗುರುತಿಸುವ ಕೆಲಸವಾಗಬೇಕು. ಇದನ್ನು ಇಲಾಖೆಯ ಜೊತೆಗೆ ಸಂಘ ಸಂಸ್ಥೆಗಳು ಮಾಡಬೇಕು ಎಂದರು.

ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಡಾ. ಕೆ.ಆರ್. ದುರ್ಗಾದಾಸ್ ಮಾತನಾಡಿ, ಬಯಲಾಟದ ಕಲೆಗಳು ಯಕ್ಷಗಾನದಂತೆಯೇ ವಿಶ್ವವಿಖ್ಯಾತಗೊಳ್ಳಲು ಪಠ್ಯ, ನೃತ್ಯ, ಹಾಡುಗಾರಿಕೆಯಲ್ಲಿ ಹಲವು ಬದಲಾವಣೆಗಳನ್ನು ತಂದು ಶಿಸ್ತುಬದ್ಧವಾಗಿ ಪ್ರದರ್ಶನಗೊಂಡರೆ ತನ್ನ ಗತವೈಭವವನ್ನು ಪಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಬಯಲಾಟ ಅಕಾಡೆಮಿಯ ಸದಸ್ಯ ಬಿ. ಪರಶುರಾಮ್ ಹರಪನಹಳ್ಳಿ ಅವರಿಂದ ಮೂಡಲಪಾಯ ಅಂದು-ಇಂದು ವಿಷಯ ಕುರಿತು ಸಂವಾದ ಗೋಷ್ಠಿ ನಡೆಸಿದರು, ಈ. ನಾಗಣ್ಣ ಮತ್ತು ಸಂಗಡಿಗರಿಂದ ಭೀಮಾರ್ಜುನರ ಕಾಳಗ ಪ್ರಸಂಗ ಕುರಿತು ಮೂಡಲ ಪಾಯ ಪ್ರದರ್ಶಿಸಿದರು. ಅಂತರರಾಷ್ಟ್ರೀಯ ಕಲಾವಿದ ಗುಂಡೂರಾಜ್ ಹೂವಿನಹಳ್ಳಿಕಾವಲು ತಂಡದವರಿಂದ ಕರಿಬಂಟನ ಕಾಳಗ ಪ್ರಸಂಗ ಕುರಿತು ಗೊಂಬೆ ಆಟ ನೋಡುಗರ ಮನಸೂರೆಗೊಂಡಿತು.

# ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ



ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ವಿಳ್ಯದೆಲೆಯಿಂದ ಅಲಂಕೃತ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಪ್ರಧಾನ ಅರ್ಚಕ ರವಿಶಾಚಾರ್, ಪ್ರಮುಖರಾದ ಹೋಟೆಲ್ ರಾಜಣ್ಣ, ಪಟೇಲ್ ಕುಮಾರ್ ಇತರರಿದ್ದರು.

# ಹೊ.ನ.ಪುರದಲ್ಲಿ ಆಂಜನೇಯಸ್ವಾಮಿ ಅಡ್ಡೆ ಉತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ : ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯದಲ್ಲಿ ಯುಗಾದಿ ವಿಶೇಷತೆಯ ಅಂಗವಾಗಿ ಶ್ರೀ ಆಂಜನೇಯಸ್ವಾಮಿ ಅಡ್ಡೆ ಉತ್ಸವವನ್ನು ಕೋಟೆ ಯುವಕರು ಭಕ್ತಿ, ಭಾವ ಪರವಶರಾಗಿ ನಡೆಸಿದರು.

ಪ್ರತಿ ಯುಗಾದಿ ದಿನದಂದು ಯುವಕರು ದೇಗುಲದಲ್ಲಿ ಒಗ್ಗೂಡಿ ನಾಲ್ಕು ರಾಜ ಬೀದಿಗಳಲ್ಲಿ ಉತ್ಸವ ನಡೆಸುವ ಪ್ರತೀತಿಯಂತೆ ಈ ಬಾರಿಯೂ ಆಚರಿಸಲಾಯಿತು. ಉತ್ಸವದ ಉದ್ದಕ್ಕೂ ಕಡಲೆಕಾಯಿ ಅಭಿಷೇಕ ನಡೆಸಲಾಯಿತು. ಆಂಜನೇಯನ ಹೆಗಲ ಮೇಲೆ ಉತ್ಸವ ಮೂರ್ತಿಯನ್ನು ಇರಿಸಿ 20 ಅಡಿ



ಉದ್ದಗಲದ ಬಿದಿರಿನ ಅಡ್ಡೆ ನಿರ್ಮಿಸಿ ಹೊತ್ತು ಉತ್ಸವ ನಡೆಸಲಾಗುತ್ತದೆ. ನೂರಾರು ಯುವಕರು ಒಟ್ಟಿಗೆ ಜೈ ಶ್ರೀರಾಮ್ ಉದ್ಘೋಷದೊಂದಿಗೆ ರಸ್ತೆಯ ಉದ್ದಗಲಕ್ಕೂ ಮೈನವಿರೇಳಿಸುವಂತೆ ಉತ್ಸವ ಹೊತ್ತು ಸಂಚರಿಸುತ್ತಾರೆ. ಸಾವಿರಾರು ಭಕ್ತರು ಉತ್ಸವವನ್ನು ಕಣ್ತುಂಬಿಕೊಂಡು ದೇಗುಲದಲ್ಲಿ ಪೂಜೆ, ಪ್ರಸಾದ ಸ್ವೀಕರಿಸುವ ಹಬ್ಬದ ವಿಶೇಷತೆಯೊಂದಿಗೆ ಉತ್ಸವ ನಡೆಯಿತು. ಇದೇ ಸಂದರ್ಭ ಕ್ರೀಡೋತ್ಸಾಹಕ್ಕಾಗಿ ಎತ್ತರದಲ್ಲಿ ಮಡಿಕೆ ಕಟ್ಟಿ ಎಟುಕಿಸಿಕೊಂಡು ಒಡೆದು ಬಹುಮಾನ ಗೆಲ್ಲುವ ಸ್ಪರ್ಧೆ ನಡೆಸಲಾಯಿತು. ಒಬ್ಬರ ಮೇಲೊಬ್ಬರು ಏರಿ ಪಿರಮಿಡ್‌ನಂತೆ ಗುಂಪಾಗುವರು. ಮೇಲೇರಿದಾತ ಎತ್ತರದಲ್ಲಿ ಕಟ್ಟಿದ ನಗದು ಬಹುಮಾನ ಇರಿಸಿದ್ದ ಮಡಿಕೆ ಕೈಗೆಟುಕದೆ ಕೆಳಗೆ ಕುಸಿದಾಗ ವೀಕ್ಷಕರು ಉತ್ತೇಜಿಸುವ ಪರಿ ಹಬ್ಬಕ್ಕೆ ಮೆರಗು ನೀಡಿತ್ತು.

# ನೀರಿನ ಬಾಟಲಿ ಕೇಳಿ ಚಿನ್ನ ಕದ್ದ ಕಿಡಿಗೇಡಿ

ಹಾಸನ: ನೀರಿನ ಬಾಟಲಿ ಖರೀದಿ ನೆಪದಲ್ಲಿ ಪ್ರಾವಿಜನ್ ಸ್ಟೋರ್‌ಗೆ ಬಂದ ಅಪರಿಚಿತನೊಬ್ಬ ಯುವತಿಯ ಕೊರಳಿನಲ್ಲಿದ್ದ 15 ಗ್ರಾಂ ತೂಕದ ಚಿನ್ನದ ಆಭರಣ ಕಿತ್ತುಕೊಂಡು ಹೋಗಿರುವ ಘಟನೆ ವಿದ್ಯುತ್ ನಗರದಲ್ಲಿ ಭಾನುವಾರ ನಡೆದಿದೆ.

ಹೆಚ್.ಎಲ್. ಮಹೇಶ್ ಅವರ ಪುತ್ರಿ ಹೆಚ್.ಎಂ. ಪ್ರಿಯದರ್ಶಿನಿ ಸರ ಕಳೆದುಕೊಂಡವರು. ಕಾಲೇಜಿಗೆ ರಜೆ ಇದ್ದ ಹಿನ್ನಲೆಯಲ್ಲಿ ಪ್ರಿಯದರ್ಶಿನಿ ತಮ್ಮ ಪ್ರಾವಿಜನ್ ಸ್ಟೋರ್‌ನಲ್ಲಿ ಕುಳಿತಿದ್ದಾಗ

ಬೆಳಿಗ್ಗೆ 11ರ ಸಮಯದಲ್ಲಿ ಬಂದ ಅಪರಿಚಿತ ಯುವಕ ಬಾಳೆ ಹಣ್ಣು ಹಾಗೂ ನೀರಿನ ಬಾಟಲಿ ಖರೀದಿಸಿದ್ದಾನೆ. ಒಂದು ಗಂಟೆ ಬಿಟ್ಟು ಪುನಃ ಬಂದು ನೀರಿನ ಬಾಟಲಿ ಕೊಡುವಂತೆ ಕೇಳಿದ್ದಾನೆ. ಪ್ರಿಯದರ್ಶಿನಿ ನೀರಿನ ಬಾಟಲಿ ಕೊಡುತ್ತಿದ್ದಾಗ ಕೊರಳಿಗೆ ಕೈ ಹಾಕಿ 5 ಗ್ರಾಂ ತೂಕದ ಚಿನ್ನದ ಪೆಂಡೆಂಟ್ ಹಾಗು 10 ಗ್ರಾಂ ತೂಕದ ಚಿನ್ನದ ಸರ ದೋಚಿ ಪರಾರಿಯಾಗಿದ್ದಾನೆ. ಕಳುವಾಗಿರುವ ಒಟ್ಟು ಚಿನ್ನಾಭರಣದ ಮೌಲ್ಯ 1.20 ಲಕ್ಷ ರೂ. ಆಗಿದೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248